# ಪಿ೧ಲ ಶರ್ಟ್‌ಇಂದ ಟೋಟೆ ಬ್ಯಾಗ್

*ನಾವು ಈಗ ಒಂದು ಸುಲಭ ಮತ್ತು ಚಮತ್ಕಾರಿ ಟೋಟೆ ಬ್ಯಾಗನ್ನು ಹಳೆಯ ಶರ್ಟ್ ಗಳಿಂದ ತಯಾರಿಸೋಣ.*









## ವಸ್ತುಗಳ ವಿವರ

ಎರಡು ಪೂರ್ತಿ ತೋಳಿರುವ ಶರ್ಟ್, ನಾವು ಒಂದು ಚೌಕವಿರುವ ಮತ್ತು ಒಂದು ಪ್ಲೇನ್ ಶರ್ಟನ್ನು ತೆಗೆದುಕೊಂಡಿದ್ದೇವೆ. ಶರ್ಟ್ ಮೀಡಿಯಮ್ ಅಥವಾ ಲಾರ್ಜ್ ಅಳತೆಯದ್ದಿರಬಹುದು.
ಚಾಲ್ಕ್
ಕತ್ತರಿ
ಬೀಡೆಡ್ ಪಿನ್
ಮ್ಯಾಚಿಂಗ್ ದಾರ
ಮತ್ತು ಲೂಪ್ ಟರ್ನರ್

ಒಂದು ಶರ್ಟನ್ನು ತೆಗೆದುಕೊಂಡು ಪೂರ್ತಿಯಾಗಿ ತೆರೆಯಿರಿ. ಶರ್ಟಿನ ಮುಂಭಾಗ ನಿಮ್ಮನ್ನು ನೋಡುವಂತೆ ಇಲ್ಲಿ ತೋರಿಸಿರುವಂತೆ ಇರಲಿ. ಈ ಬ್ಯಾಗ್ ಹೊಲೆಯಲು ಸುಲಭವಾಗುವಂತೆ ನಾವು ಟೆಂಪ್ಲೇಟನ್ನು ಮಾಡಿದ್ದೇವೆ. ಅದು ೧೬ ಇಂಚು ಉದ್ದ ಮತ್ತು ೧೫ ಇಂಚು ಅಗಲವಿರುತ್ತದೆ. ಈಗ ಚೌಕದ ಟೆಂಪ್ಲೇಟನ್ನು ಶರ್ಟ್ ಮೇಲೆ ಪಾಕೆಟ್ ಕೆಳಗಡೆ ಬರುವಂತೆ ಇಡಬೇಕು. ಪ್ಯಾಟರ್ನನನ್ನು ಶರ್ಟ್ ಮೇಲೆ ಇಟ್ಟಾಗ ಟೆಂಪ್ಲೇಟನ್ನು ಪಾಕೆಟ್ ಮೇಲೆ ಬರುವಂತೆ ಮತ್ತು ಸಾಕಷ್ಟು ಬಟ್ಟೆ ಅಂದರೆ ೨.೫ ಇಂಚು ಮೇಲೆ ಮತ್ತು ಸೈಡ್ ಗಳಲ್ಲಿ ಪಕೆಟಿನ ೧ ಇಂಚು ಹೆಚ್ಚಾಗಿರುವಂತೆ ನೋಡಿಕೊಳ್ಳಿ . ಗಮನಿಸಿ, ಪಾಕೆಟ್ ಇರಬೇಕು ಮತ್ತು ಅದು ಬ್ಯಾಗ್ ಬಟ್ಟೆಯ ಒಂದು ಭಾಗವಾಗಿರಬೇಕು. ಟೆಂಪ್ಲೇಟನ್ನು ಶರ್ಟಿಗೆ ಪಿನ್ ಮಾಡಿ.ಬಟ್ಟೆಯ ಎರಡೂ ಪದರಕ್ಕೂ ಪಿನ್ ಮಾಡಿದೆಯೇ ಎಂದು ನೋಡಿಕೊಳ್ಳಿ, ಇದಾದ ಮೇಲೆ ಟೆಂಪ್ಲೇಟನ್ನು ಔಟ್ ಲೈನ್  ಚಲ್ಕಿನ ಸಹಾಯದಿಂದ ಹಾಕಿ. ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಈಗ, ಕತ್ತರಿಯಿಂದ ಬಟ್ಟೆಯನ್ನು ಕತ್ತರಿಸಿ ಮತ್ತು ಪಕ್ಕಕಿಡಿ.





ಈಗ ಬ್ಯಾಗಿನ ಬೆಲ್ಟಿಗೆ ನಾವು ಇನ್ನೊಂದು ಟೆಂಪ್ಲೇಟನ್ನು ಮಾಡಿದ್ದೇವೆ ಅದು ೨ ೧/೨ ಇಂಚು ಅಗಲದ್ದು. ಬೆಲ್ಟಿನ ಉದ್ದ ತೋಳಿನ ಉದ್ದಕ್ಕೆ ಸಮವಾಗಿರುತ್ತದೆ. ಇದಕ್ಕೆ ನಮಗೆ ೩ ಪೀಸ್ ಬಟ್ಟೆಗಳು ಬೇಕಾಗುತ್ತದೆ. ಟೆಂಪ್ಲೇಟನ್ನು ತೋಳಿನ ಮೇಲೆ ಇಟ್ಟು ಎರಡೂ ಪದರಕ್ಕೆ ಪಿನ್ ಮಾಡಿ. ಚಾಲ್ಕಿನ ಸಹಾಯದಿಂದ ಔಟ್ ಲೈನನ್ನು ಮಾರ್ಕ್ ಮಾಡಿ. ಟೆಂಪ್ಲೇಟನ್ನು ಅನ್ ಪಿನ್ ಮಾಡಿ. ಮಾರ್ಕ್ ಮಾಡಿರುವ ಗೆರೆಯ ಮೇಲೆ ಕತ್ತರಿಸಿ. ಈಗ ನಮ್ಮ ಹತ್ತಿರ ಎರಡು ಸ್ಟ್ರಿಪ್ ಗಳು ತಯಾರಾಗಿದೆ. ಈಗ ಮುಂದಿನ ಸ್ಟ್ರಿಪಿಗೆ ಟೆಂಪ್ಲೇಟನ್ನು ಎಡ ಭಾಗಾಕ್ಕೆ ಬಟ್ಟೆಯ ಬಾಡಿ ಭಾಗದಲ್ಲಿ ಇಲ್ಲಿ ತೋರಿಸಿರುವಂತೆ ಇಡಬೇಕು. ಪಿನ್ ಮಾಡಿ, ಮಾರ್ಕ್ ಮಾಡಿ ಮತ್ತು ಕತ್ತರಿಸಿ.









ಈಗ ಸರಾಂಶ ನಮ್ಮ ಹತ್ತಿರ ಎರಡು ಆಯತಾಕಾರದ ಪೀಸ್ ಬ್ಯಾಗಿಗಾಗಿ ಮತ್ತು ೩ ಸ್ಟ್ರಿಪ್ಸ್ ಬೆಲ್ಟ್ ಅಥವಾ ಬ್ಯಾಗಿನ ಹ್ಯಾಂಡಲಿಗಾಗಿ ಇದೆ. ಇದೇ ವಿಧಾನವನ್ನು ಇನ್ನೊಂದು ಶರ್ಟಿಗೂ ಮಾದೋಣ.























ಮೊದಲೇ ಮಾಡಿದಂತೆ ಎರಡು ಆಯತಾಕಾರದ ಫಿಸ್ ಮತ್ತು ೩ ಸ್ಟ್ರಿಪ್ಸ್ ಹ್ಯಾಂಡಲಿಗಾಗಿ . ಮೊದಲು ತೋಳುಗಳನ್ನು ಪಿನ್ ಮಾಡೋಣ. ಮೊದಲ ಎರಡು ಸ್ಟ್ರಿಪಿನ್ನು ಮುಂಭಾಗಕ್ಕೆ ಸೇರಿಸಿ ತೋರಿಸಿರುವಂತೆ ಪಿನ್ ಮಾಡಿ. ಈಗ ಎರಡನೆ ಶ್ರಿಪಿನ ಬಾಟಮನ್ನು ತೆಗೆದುಕೊಂಡು ಅದನ್ನು ತಿರುಗಿಸಿ ಹೇಗೆಂದರೆ ಎರಡನೆ ಸ್ಟ್ರಿಪಿನ ಬಲಭಾಗದ ತುದಿ ಮೂರನೆ ಸ್ಟ್ರಿಪಿನ ಬಲಭಾಗದ ಮೇಲ್ಭಾಗಕ್ಕೆ ತೋರಿಸಿರುವಂತೆ ಬರಬೇಕು. ಇವೆರಡನ್ನು ಒಟ್ಟಿಗೆ ಪಿನ್ ಮಾಡಿ.

ಈಗ ಚೌಕವಿರುವ ಪೀಸಿನ ಕಡೆ ಗಮನವಹಿಸೋಣ. ಅದನ್ನು ಬಲಭಾಗ ಬಲಭಾಗ ನೋಡುವಂತೆ ಇಟ್ಟು ಎಲ್ಲಾ ನಾಲ್ಕು ಅಂಚಿನಲ್ಲಿ ವೀಡಿಯೋದಲ್ಲಿ ತೋರಿಸಿರುವಂತೆ ಪಿನ್ ಮಾಡಿ. ನಾವು ಚೌಕದ ಸುತ್ತಲೂ ಮೇಲ್ಭಾಗವನ್ನು ಬಿಟ್ಟು ಹೊಲೆಯಬೇಕು. ಪಯಿಂಟ್ ಇರುವುದನ್ನು ಹೊರತುಪಡಿಸಿ. ಆದರೆ ನೆನೆಪಿರಲಿ ಓಪೆನಿಂಗ್ ೩ ಇಂಚಷ್ಟಿರಬೇಕು. ಇದು ಬ್ಯಾಗನ್ನು ಒಳಗಿನಿಂದ ಹೊರಕ್ಕೆ ತಿರುಗಿಸಲು ಸಹಾಯವಾಗುತ್ತದೆ. ಓಪೆನಿಂಗನ್ನು ಚಾಲ್ಕಿನ ಸಹಾಯದಿಂದ ಮಾರ್ಕ್ ಮಾಡಿ.

ಈಗ ಚೌಕವಿರುವ ಶರ್ಟಿನ ಕಡೆ ಗಮನವಹಿಸೋಣ. ಪ್ಲೇನ್ ಶರ್ಟಿನಂತೆ ಎರಡಿ ತೆಳುವಾದ ಸ್ಟ್ರಿಪಿನ ತುದಿಯನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಸೇರಿಸಿ. ನಂತರ ಮಧ್ಯ ಸ್ಟ್ರಿಪಿನ ತುದಿಯನ್ನು ತೆಗೆದುಕೊಂಡು ಬಲಭಾಗ ಬಲಭಾಗವನ್ನು ನೊಡುವಂತೆ ಮೂರನೆ ಸ್ಟ್ರಿಪಿಗೆ ಹೊಂದಿಸಿ. ಪಿನ್ ಮಾಡಿ. ಇದನ್ನೇ ಚೌಕದ ಪೀಸ್ ಗಳಿಗೂ ಮಾಡಿ. ಅದನ್ನು ಬಲಭಾಗ ಬಲಭಾಗವನ್ನು ನೋಡುವಂತೆ ಇಟ್ಟು ಎಲ್ಲಾ ನಾಲ್ಕು ಕಡೆನೂ ಪಿನ್ ಮಾಡಿ. ಗಮನದಲ್ಲಿರಲಿ ಇದಕ್ಕೆ ನೀವು ಮಧ್ಯದಲ್ಲಿ ೩ ಇಂಚು ಬಿಡುವ ಅಗತ್ಯವಿಲ್ಲ.

ಎಲ್ಲಾ ವಿವರವಾದ ಕಟಿಂಗ್ ಮತ್ತು ಪಿನ್ ಮಾಡಿದ ಮೇಲೆ ಈಗ ಅದನ್ನು ಹೊಲೆಯುವ ಸಮಯ. ಚೌಕವಿರುವ ಬಟ್ಟೆಯನ್ನು ಊಷಾ ಜನೋಮ್ ಅಲ್ಯೂರ್ ಡಿ ಎಲ್ ಎಕ್ಸ್ ಹೊಲಿಗೆ ಯಂತ್ರಕ್ಕೆ ತೆಗೆದುಕೊಂಡು ಹೋಗಿ. ಚೌಕಾಕಾರ ಪೀಸಿನ ತುದಿಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ಪ್ಯಾಟರ್ನ್ ಸೆಲೆಕ್ಟರನ್ನು A ಮತ್ತು ಹೊಲಿಗೆಯ ಉದವನ್ನು ೨.೫ಗೆ ಇಡಬೇಕು. ಸ್ಥಿರವಾದ ವೇಗದಲ್ಲಿ ಹೊಲೆಯಲು ಪ್ರಾರಂಭಿಸಿ. ನೆನಪಿರಲಿ, ನಾವು ಮೂರು ಕಡೆ ಹೊಲೆಯಬೇಕು. ಮೇಲ್ಭಾಗವನ್ನು ತೆರೆದಿರಬೇಕು. ನಿಲ್ಲಿಸಿ ದಾರವನ್ನು ಕತ್ತರಿಸಿ ಮತ್ತು ಹೊಲೆಯಲು ಮುಂದುವರಿಸಿ. ಇದನ್ನು ಮುಗಿಸಿದ ಮೇಲೆ ಎಲ್ಲಾ ಫ್ರೇಯಿಂಗ್ ಎಡ್ಜನ್ನು ವೀಡಿಯೋದಲ್ಲಿ ತೋರಿಸಿರುವಂತೆ ಕತ್ತರಿಸಿ. ಈಗ ಸಾರಾಂಶ ನಾವು ಸೈಡ್ ಗಳನ್ನು, ಬಾಟಮನ್ನು ಹೊಲೆದಿದ್ದೇವೆ ಮತ್ತು ಮೇಲ್ಭಾಗವನ್ನು ಬಿಟ್ಟಿದ್ದೇವೆ. ಈಗ ಪಿನ್ ಮಾಡಿರುವ ಸ್ಟ್ರಿಪನ್ನು ತೆಗೆದುಕೊಂಡು ಒಂದು ತುದಿಯನ್ನು ವೀಡಿಯೋದಲ್ಲಿ ತೋರಿಸಿರುವಂತೆ ಹೊಲೆಯಬೇಕು. ರಿವರ್ಸ್ ಹೊಲಿಗೆ ಪ್ರಾರಂಭದಲ್ಲಿ ಮತ್ತು ಕೊನೆಯಲ್ಲಿ ಹೊಲಿಗೆಯನ್ನು ಭದ್ರವಾಗಿಸಲು ಹಾಕಲು ಮರೆಯಬೇಡಿ. ಹೊಲೆದ ನಂತರ ಪಿನ್ಗಳನ್ನು ತೆಗೆಯುತ್ತಾ ಹೋಗಿ ಮತ್ತು ಇನ್ನೊಂದು ತುದಿಗೆ ತಲುಪಿ. ಇನ್ನೊಂದು ತುದಿಯನ್ನೂ ಹೊಲೆಯಿರಿ ಮತ್ತು ಪಿನ್ ಗಳನ್ನು ತೆಗೆಯಿರಿ. ನೀವು ಕಾಣಬಹುದು ನಾವು ಎಲ್ಲಾ ಮೂರು ಸ್ಟ್ರಿಪ್ಸನ್ನು ಒಟ್ಟಿಗೆ ಸೇರಿಸಿದ್ದೇವೆ.

ಈಗ, ಪ್ಲೇನ್ ಶರ್ಟನ್ನು ತೆಗೆದುಕೊಳ್ಳಿ ಒಂದು ಕಡೆಯಿಂದ ಹೊಲೆಯಲು ಪ್ರಾರಂಭಿಸಿ ಮತ್ತು ಮಾರ್ಕ್ ಮಾಡಿರುವ ೩ ಇಂಚನ್ನು ಬ್ಯಾಗನ್ನು ತಿರುಗಿಸಲು ಹಾಗೆ ಬಿಡಿ. ಮಾರ್ಕ್ ಇರುವ ಕಡೆ ರಿವರ್ಸ್ ಹೊಲಿಗೆಯನ್ನು ಹಾಕಿ. ದಾರವನ್ನು ಕತ್ತರಿಸಿ ಇನ್ನೊಂದು ಮಾರ್ಕಿನಿಂದ ಹೊಲೆಯಲು ಪ್ರಾರಂಭಿಸಿ. ಹೊಲಿಗೆಯನ್ನು ತುದಿ ತಲಪುವವರೆಗೂ ಹಾಕಬೇಕು. ದಾರವನ್ನು ಕತ್ತರಿಸಿ. ಇದೇ ವಿಧಾನವನ್ನು ಇನ್ನು ಎರಡು ಕಡೆ ಪುನರಾವರ್ತಿಸಿ. ಅದನ್ನು ಪ್ರೆಸ್ಸರ್ ಫುಟಿಗೆ ಅಲೈನ್ ಮಾಡಿ ತುದಿಯನ್ನು ತಲಪುವವರೆಗೂ ಹೊಲೆಯಿರಿ.










ನೆನೆಪಿನಲ್ಲಿರಲಿ ನಾವು ಮೇಲ್ಭಾಗವನ್ನು ಹೊಲೆಯದೆ ಹಾಗೆ ಬಿಡಬೇಕು. ನೀವು ನೋಡಬಹುದು ಗ್ಯಾಪ್ ಕೂಡ ಹೊಲೆಯದೆ ಹಾಗೆ ಇದೆ.

ಈಗ ಪಿನ್ ಮಾಡಿರುವ ಪ್ಲೇನ್ ಸ್ಟ್ರಿಪನ್ನು ತೆಗೆದುಕೊಂಡು ಪಿನ್ ಮಾಡಿರುವ ಎಡ್ಜ್ ನ್ನು ಹೊಲೆಯಿರಿ. ಹೊಲೆಯುತ್ತಿರುವಾಗ ಪಿನ್ ಗಳನ್ನು ತೆಗೆಯುತ್ತಾ ಹೋಗಿ. ಸಣ್ಣಸ್ಟ್ರಿಪ್ಗಿಗೂ ಹಿಂಬದಿಯ ಹೊಲಿಗೆ ಅತ್ಯಂತ ಮುಖ್ಯ. ನಿಮ್ಮ ಅಂತಿಮ ಹೊಲಿಗೆ ನೋಡಲು ಹೀಗೆ ಕಾಣಬೇಕು.ಈಗ ಎರಡೂಸ್ಟ್ರಿಪ್ ಗಳನ್ನು ಒಂದರ ಪಕ್ಕ ಇನ್ನೊಂಡಿಡಬೇಕು. ಪ್ಲೇನ್ ಸ್ಟ್ರಿಪನ್ನು ಚೌಕವಿರುವಸ್ಟ್ರಿಪಿನ ಮೇಲೆ ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು. ಮ್ಯಾಚ್ ಮಾಡಿರುವ ಸ್ಟ್ರಿಪನ್ನುಪ್ರೆಸ್ಸರ್ ಫುಟಿನ ಕೆಳಗೆ ಅಲೈನ್ ಮಾಡಿ ಉದ್ದವಿರುವ ಕಡೆ ಹೊಲೆಯುತ್ತಾ ಹೋಗಿ. ತುದಿಯನ್ನು ತಲಪುವವರೆಗೂ ಹೊಲೆಯುತ್ತಾ ಹೋಗಿ. ಅಡ್ಡವಾದ ಅಂಚನ್ನು ಬಿಟ್ಟು ಇನ್ನೊಂದು ಕಡೆಯಿಂದ ಹೊಲೆಯುತ್ತಾ ಹೋಗಿ. ದಾರವನ್ನು ಕತ್ತರಿಸಿ. ಇದನ್ನು ಮುಗಿಸಿದ ಮೇಲೆ ಲೂಪ್ ಟರ್ನರನ್ನು ತೆಗೆದುಕೊಂಡು ಅದನ್ನುಸ್ಟ್ರಿಪಿನ ಅಡ್ಡವಾದ ಕಡೆಯಿಂದ ಒಳಕ್ಕೆ ಹಾಕಿ ಹಿಂಭಾಗಕ್ಕೆ ಹಾಕುತ್ತಾ ಲೂಪ್ ಟರ್ನರ್ ಹೊಲೆಯದೆ ಇರುವ ಭಾಗದಿಂದ ಹೊರಕ್ಕೆ ಬರುವವರೆಗೂ ಎಳೆಯಿರಿ. ಈಗ ನೀವುಸ್ಟ್ರಿಪನ್ನು ಒಳಗಿಂದ ಹೊರಕ್ಕೆ ಸುಲಭವಾಗಿ ತಿರುಗಿಸಲು ಸಾಧ್ಯವಾಗಬೇಕು. ನಾವು ಬ್ಯಾಗಿನ ಸೀಮನ್ನು ಚಪಟ್ಟೆ ಮಾಡಬೇಕು ಮತ್ತು ಬ್ಯಾಗಿನ ಹ್ಯಾಂಡಲಿಗೆ ಅಚ್ಚುಕಟ್ಟಾದ ನೋಟವನ್ನು ಕೊಡಬೇಕು. ಸ್ಟ್ರಿಪನ್ನು ಕ್ರೀಸ್ ತೆಗೆಯಲು ಐರನ್ ಮಾಡೋಣ. ಮತ್ತು ಮಡಕೆಯನ್ನು ಸೆಟ್ ಮಾಡೋಣ. ನೋಡಿ ಐರನ್ ಮಾಡಿದ ಮೇಲೆ ಸ್ಟ್ರಿಪ್ ಹೇಗೆ ಗರಿಗರಿಯಾಗಿ ಮತ್ತು ಕ್ಲೀನಾಗಿದೆ. ಈಗ ಬೆಲ್ಟಿಗೆ ತುದಿಯಲ್ಲಿ ಹೊಲಿಗೆ ಹಾಕೋಣ.






ಈಗ ಮೈನ್ ಬ್ಯಾಗಿನ ಕೆಲಸ ಮಾಡುವ ಸಮಯ. ಎರಡು ನಾವು ಹೊಲೆದಿರುವ ಚೌಕಾಕಾರದ ಬಟ್ಟೆಯನ್ನು ತೆಗೆದುಕೊಳ್ಳಿ ಮತ್ತು ಅದನ್ನು ಒಂದರ ಪಕ್ಕ ಇನ್ನೊಂದು ಇಡಬೇಕು. ನಾವು ಚೌಕವಿರುವ ಬಟ್ಟೆಯ ಎಡ್ಜ್ ಅನ್ನು ಹೊಲೆದಿದ್ದೇವೆ, ಈಗ ಹೊಲೆಯದೆ ಇರುವ ಕಡೆಯನ್ನು ತೆಗೆದುಕೊಂಡು ಒಳಗಿನಿಂದ ಹೊರಕ್ಕೆ ತಿರುಗಿಸಿ.ಈಡ್ಜ್ ಮೇಲೆ ಗಮನವಿರಲಿ, ತುದಿಗಳನ್ನು ನೀಟಾದ ಫಿನಿಷಿಗಾಗಿ ಸರಿಯಾಗಿ ಹೊರಕ್ಕೆ ಹಾಕಿ.

ಈಗ ಪ್ಲೇನ್ ಲನಿಂಗ್ ಬಟ್ಟೆಯನ್ನು ತೆಗೆದುಕೊಂಡು ಚೌಕಾಕಾರದ ಬಟ್ಟೆಯನ್ನು ಅದರ ಒಳಕ್ಕೆ ತೋರಿಸಿರುವಂತೆ ಬಲಭಾಗ ಬಲಭಾಗವನ್ನು ನೋಡುವಂತೆ ಇಡಬೇಕು. ಬ್ಯಾಗ್ ಸ್ಟ್ರಾಪನ್ನು ಚೌಕಾಕಾರದ ಬಟ್ಟೆಯ ಒಳಕ್ಕೆ ತಳ್ಳಿ, ಈಗ ಮೂರು ಪದರವನ್ನು ಜೋಡಿಸುವುದನ್ನು ನೋಡೋಣ. ಲೈನಿಂಗ್ ಬಟ್ಟೆಯ ಸೀಮನ್ನುಸ್ಟ್ರಿಪಿನ ಒಂದು ತುದಿಗೆ ಮತ್ತು ಮೇನ್ ಬ್ಯಾಗಿನ ಸೀಮನ್ನ ಲೈನಿಂಗ್ ಬಟ್ಟೆಯ ಸೀಮಿಗೆ ಮ್ಯಾಚ್ ಮಾಡಿ ಅದನ್ನುಸ್ಟ್ರಿಪಿನ ಮಧ್ಯಭಾಗದಲ್ಲಿ ಇಡಬೇಕು. ಇದು ನಿಮಗೆ ಮೂರು ಪದರದ ಬಟ್ಟೆ ಸಿಗುತ್ತದೆ. ಅದನ್ನು ಒಟ್ಟಿಗೆ ಪಿನ್ ಮಾಡಿ. ಸ್ಟ್ರಿಪ್ ಲೈನಿಂಗ್ ಬ್ಯಾಗ್ ಮತ್ತು ಮೇನ್ ಬಟ್ಟೆಯ ಬ್ಯಾಗಿನ ಮಧ್ಯದಲ್ಲಿ ಬರಬೇಕು.




ಇನ್ನೊಂದು ಕಡೆ ಪ್ರಾರಂಭಿಸುವ ಮೊದಲು ಹ್ಯಾಂಡಲ್ ತಿರುಚಾಗದಂತೆ ಗಮನವಹಿಸಿ ಮತ್ತು ಅದನ್ನು ಎರಡು ಮೇನ್ ಬಟ್ಟೆಯ ಮಧ್ಯದಲ್ಲಿ ಪಿನ್ ಮಾಡಿ. ಸೀಮ್ಸನ್ನೂ ಗಮನದಲ್ಲಿಟ್ಟುಕೊಳ್ಳಿ




ಹೊಲೆಯುವಾಗ ಹೆಚ್ಚಾದ ಸಹಾಯಕ್ಕೆ ಬಟ್ಟೆಯನ್ನು ಒಟ್ಟಿಗೆ ಮೇಲ್ಭಾಗದಲ್ಲಿ, ಎರಡೂ ಕಡೆ ಪಿನ್ ಮಾಡಿ. ಈಗ ನಾವು ಮೇಲ್ಭಾಗದ ಎಲ್ಲಾ ಕಡೆನ್ನೂ ಸುತ್ತಲೂ ಹೊಲೆಯಬೇಕು.

ಬಟ್ಟೆಯನ್ನುಪ್ರೆಸ್ಸರ್ ಫುಟಿನ ಕೆಳಗಡೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ.















ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗಡೆ ಅಲೈನ್ ಮಾಡಿ ಹೊಲೆಯಲು ಪ್ರಾರಂಭಿಸಿ. ಬ್ಯಾಗಿನ ಓಪೆನಿಂಗ್ ಸುತ್ತಲೂ ಹೊಲೆಯುತ್ತಾ ಹೋಗಿ ಮತ್ತು ಹ್ಯಾಂಡಲ್ ಗಳು ಸೀಮಿಗೆ ಸರಿಯಾಗಿ ಹೊಲೆದಿದ್ದೀರೆ ಎಂದು ಪರಿಶೀಲಿಸಿ.ಕೊನೆಯಲ್ಲಿ ಹೊಲಿಗೆಯನ್ನು ಭದ್ರಗೊಳಿಸಲು ರಿವೆರ್ಸ್ ಹೊಲಿಗೆ ಹಾಕಿ.

ಲನಿಂಗ್ ಬಟ್ಟೆಯಲ್ಲಿ ೩ ಇಂಚು ಗ್ಯಾಪ್ ಬಿಟ್ಟಿರುವುದು ನೆನಪಿದೆಯೇ? ಗ್ಯಾಪನ್ನು ಚೌಕವಿರುವ ಬಟ್ಟೆಯನ್ನು ಹೊರತೆಗೆಯಲು ಉಪಯೋಗಿಸಿ. ನಿಧಾನವಾಗಿ ಮತ್ತು ಹುಷಾರಾಗಿ ತೆಗೆಯಿರಿ ಈಗ ಹಾಕಿರುವ ಹೊಲಿಗೆಗಳು ಹರೆಯದಂತೆ ತಿರುಗಿಸಿ. ಈಗ ೩ ಇಂಚು ಗ್ಯಾಪನ್ನು ಹೊಲೆಯುವ ಸಮಯ.ಬಟ್ಟೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಇಟ್ಟು ನೇರ ಹೊಲಿಗೆಯನು ಗ್ಯಾಪ್ ಮುಚ್ಚಲು ಹಾಕಬೇಕು. ರಿವೆರ್ಸ್ ಹೊಲಿಗೆಯನ್ನು ಪ್ರಾರಂಭದಲ್ಲಿ ಮತ್ತೆ ಕೊನೆಯಲ್ಲಿ ಹಾಕಬೇಕು. ಲನಿಂಗ್ ಬಟ್ಟೆಯನ್ನು ಬ್ಯಾಗಿನ ಒಳಕ್ಕೆ ಹಾಕಿ. ನಾವೀಗ ಮೇಲ್ಭಾಗದ ಓಪೆನಿಂಗನ್ನು ಅಚ್ಚುಕಟ್ಟು ಮಾಡಬೇಕು. ಈಗ ಮೊದಲು ಐರನ್ ಮಾಡೋಣ.ಓಪೆನಿಂಗನ್ನು ಚಪ್ಪಟೆ ಮಾಡಿ ಬಟ್ಟೆಯನ್ನು ಚಪಟ್ಟೆ ಮಾಡಲು ಐರನ್ ಮಾಡಿ. ಈ ಹಂತವನ್ನು ಬ್ಯಾಗಿನ ಸುತ್ತಲೂ ಮಾಡಬೇಕು. ಈಗ ಇನ್ನೊಂದೇ ಹಂತ ಮಿಕ್ಕಿರುವುದು.

ಬ್ಯಾಗಿನ ಮೇಲ್ಭಾಗದ ಓಪೆನಿಂಗ್ ಇರುವ ಕಡೆಯನ್ನು ಪ್ರೆಸ್ಸರ್ ಫುಟಿನ ಕೆಳಗೆ ಬಲಭಾಗ ಮೇಲೆ ಬರುವಂತೆ ಇಟ್ಟು ಸುತ್ತಲೂ ಹೊಲಿಗೆಯನ್ನು ಹಾಕಬೇಕು. ಇದು ಬಟ್ಟೆಯನ್ನು ಜಾಗದಲ್ಲಿ ಇಡಲು ಸಹಾಯವಾಗುತ್ತದೆ.

ಈಗ ಇದನ್ನು ಮುಗಿಸಿದ್ದೇವೆ. ನಮ್ಮ ಡಿ ಐ ವೈ ಬ್ಯಾಗ್ ಈಗ ತಯಾರಾಗಿದೆ. ನಿಮ್ಮ ತೋಟೆ ಬ್ಯಾಗ್ ಸ್ಟೈಲಿಷ್ ಅಲ್ಲದೆ ಪರಿಸರ ಸ್ನೇಹಿ ಕೂಡ. ನೀವು ಸಾಮಾನು ತರಲು ಅಥವಾ ಕಾಲೇಜಿಗೂ ನಿಮ್ಮ ಹ್ಯಾಂಡಿ ವರ್ಕನ್ನು ತೋರಿಸಲು ತೆಗೆದುಕೊಂಡು ಹೋಗಬಹುದು. ಈ ಚಿಕ್ಕ ಪಾಕೆಟ್ ನಿಮ್ಮ ಕನ್ನಡಕ, ಚಿಲ್ಲರೆ ಅಥವಾ ನಿಮಗೆ ಬೇಕಾಗಿರುವ ವಸ್ತುಗಳನ್ನು ಇಟ್ಟುಕೊಳ್ಳಲು ಉಪಯೋಗವಾಗುತ್ತದೆ. ನವು ಇದನ್ನು ಪೂರ್ತಿಯಾಗಿ ಪ್ರೀತಿಸುತ್ತೇವೆ. ನಿಮಗೆ ಹೇಗೆ ಎನ್ನಿಸಿತು ಎಂದು ನಮಗೆ ಕಮೆಂಟಿನಲ್ಲಿ ತಿಳಿಸಿ. ಲೈಕ್ ಶೇರ್ ಮತ್ತು ಸಬ್ ಸಬ್ಸ್ಕ್ರೈಬ್ ಮಾಡಲು ಮರೆಯಬೇಡಿ.